ಕವಿತೆ




## ಧನಂಜಯ ಕುಂಬ್ಳೆ

ಕಲೆ: ರೂಪಶ್ರೀ ಕಲ್ಲಿಗನೂರು




# ಉರಿಯ ಉಯ್ಯಾಲೆ

ಸವೆದ ದಾರಿಯ ಬದಿ
ಬೆಳೆದ ಗರಿಕೆಯ ಹುಲ್ಲು
ಮೇಲೊಂದು ಪುಟ್ಟ ನೀರಹನಿ
ಮುತ್ತು

ಸೂರ್ಯಪ್ರೀತಿಗೆ ಮೈಯೊಡ್ಡಿದ ಮುತ್ತಿಗೆ
ಬೆರಳಾಟದ ಪುಳಕ
ಒಳಗೊಳಗೆ ಜಳಕ

ಬಾನ ಕುಣಿಕೆಯಲಿ ತೂಗಿ
ಇಳಿಬಿಟ್ಟ ಲತೆಯಲ್ಲಿ
ಉಯ್ಯಾಲೆಯಾಡುತ ಮೈಮರೆತ
ಹನಿಗೆ
ಕೆಳಗೆ ಕೆಂಡದ ರಾಶಿ ಕಾಣಲಿಲ್ಲ

ಕೆಂಪು ಕೆಂಪು ಹೊಳೆವ ಪ್ರೀತಿ
ಮೇಲೆ ದಿನಮಣಿ
ನಡುವೆ ಉಯ್ಯಾಲೆ
ಕೆಳಗೆ ಉರಿವ ನಿಗಿ ನಿಗಿ ಕೆಂಡ

ಉರಿಯ ಉಯ್ಯಾಲೆಯಲಿ
ಹನಿಯ ಧ್ಯಾನ